ಇ)ಬೆಂಗಳೂರು ನಗರದಲ್ಲಿರುವ ವಸತಿ ರಹಿತ ಬಡವರನ್ನು ಗುರುತಿಸುವ ಸಲುವಾಗಿ ನಗರ ಆಶ್ರಯ ಸಮಿತಿಯನ್ನು ರಚಿಸಲಾಗಿದ್ದು, ಆದೇಶ ಸಂಖ್ಯೆ , ವಇ 1 ಹೆಚ್‌ಎಎಂ 2004 ಬೆಂಗಳೂರು ದಿನಾಂಕ,03–03–2004ರ ಆದೇಶದಲ್ಲಿ ತಿಳಿಸಿದ್ದು ಇದಕ್ಕಾಗಿ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಕಾರ್ಯಕ್ರಮ ಅನುಷ್ಠಾನ ಜಾರಿಯಲ್ಲಿರುತ್ತದೆ

ಈ)'ಆ' ದಲ್ಲಿ ಉತ್ತರಿಸಿದಂತೆ

ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ)107(105)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ 'ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಉಡುಪಿ ಜಿಲ್ಲೆಗೆ ಮಂಜೂರಾಗಿರುವ ಒಟ್ಟು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಸಂಖ್ಯೆ ಎಷ್ಟು?

ಆ) ಇವರನ್ನು ಯಾವ ರೀತಿ ಭರ್ತಿ ಮಾಡಿಕೊಳ್ಳಲಾಗುತ್ತಿದೆ,

ಇ) ಇವರಲ್ಲಿ ಬೇರೆ ಇಲಾಖೆಯಿಂದ ಎರವಲು ಸೇವೆ ಮೇಲೆ ಜಿಲ್ಲಾ ಪಂಚಾಯಿತಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆಯೇ,

ಈ) ಇದರಿಂದ ಮೂಲ ಇಲಾಖೆಗೆ ತೊಂದರೆಯಾಗುತ್ತಿಲ್ಲವೇ,

ಉ) ಎರವಲು ಸೇವೆಯಲ್ಲಿದ್ದ ಮೂಲ ಇಲಾಖೆಯವರು ವಾಪಾಸ್ಸು ಕಳುಹಿಸಲು ಆದೇಶಿಸಿದರೆ, ಇವರನ್ನು ಬೇರೆ ಕಡೆಗೆ ವರ್ಗಾವಣೆ ಮಾಡುವ ಅಧಿಕಾರ ಜಿಲ್ಲಾ ಪಂಚಾಯತಿಗೆ ಇದೆಯೇ,

ಊ) ಇಲ್ಲವಾದರೆ, ಸರ್ಕಾರಿ ಆದೇಶದ ಉಲ್ಲಂಘನೆ ಯಾಗಿರುವು ದಲ್ಲವೇ?

ಶ್ರೀ ಸಿ ಎಂ ಉದಾಸಿ

ಅ)146, ಗ್ರೇಡ್–1 ಗ್ರಾ.ಪಂ ಗಳು–61, ಗ್ರೇಡ್–2 ಗ್ರಾ.ಪಂ ಗಳು–85

ಆ) ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ನೇಮಿಸಿಕೊಳ್ಳಲಾಗುವುದು

ಇ) ಗ್ರೇಡ್–1 ವೃಂದದಲ್ಲಿ ಶೇಕಡಾ 20ರಷ್ಟು ಹುದ್ದೆಗಳಿಗೆ ನಿಯೋಜನೆ ಮಾಡಲು ಅವಕಾಶವಿದ್ದು, ಅದರನ್ವಯ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ

ಈ)ಮೂಲ(ಮಾತೃ)ಇಲಾಖೆಯ ಅಭಿಪ್ರಾಯ ಹಾಗೂ ಸಮ್ಮತಿ ಮೇಲೆ ನಿಯೋಜನೆ ಮಾಡಿಕೊಳ್ಳಲಾಗುವುದು

ಉ) ಪ್ರಶ್ನೆ "ಈ" ಭಾಗಕ್ಕೆ ಉತ್ತರಿಸಿರುವ ಕಾರಣ ಈ ಪ್ರಶ್ನೆಯು ಉದ್ಭವಿಸುವುದಿಲ್ಲ

ಊ) ಉದ್ಭವಿಸುವುದಿಲ್ಲ